ಕೇಳಿಕೊಂಡಳು. ಬೆಂಕಿಗೆ ಹಾರಿ ಸಾಯುವ ತನ್ನ ಆಲೋಚನೆಯನ್ನು ತಲೆಯಿಂದ ತೆಗೆದುಬಿಸುಟಳು. ಪ್ರಜ್ಞೆ ಕಳಕೊಂಡು ಮಲಗಿದ್ದ ಗಂಡ ಏಳಲೆಂದು ಗಟ್ಟಿಯಾಗಿ ಬೊಬ್ಬೆ ಹಾಕಿದಳು. ಬೀದಿಯುದ್ದಕ್ಕೂ ಚೀತ್ಕಾರಗಳೇ ತುಂಬಿರುವಾಗ ಅವಳ ಧ್ವನಿ ಯಾರಿಗೆ ಕೇಳಬೇಕು? ಅವಳ ಮನೆಯಿಂದ ಕೂಗಳತೆಯ ದೂರದಲ್ಲಿದೆ ಪೊಲೀಸು ಸ್ಟೇಶನ್ನು. ಅಲ್ಲಿಗೆ ಹೋಗಿ ಪೊಲೀಸರ ಸಹಾಯ ಕೇಳಿದರೇನು ಎಂದು ಬೀದಿಗೆ ಕಾಲಿಟ್ಟಳು. ಪೊಲೀಸು ಸ್ಟೇಷನ್ನು ಧಗಧಗ ಉರಿಯುತ್ತಿತ್ತು. ಅದರ ಮುಂದೆ ದೊಡ್ಡ ಗುಂಪಿತ್ತು. ಪೊಲೀಸರು ಸ್ಟೇಷನ್ನಿನಿಂದ ಗುಂಡು ಹಾರಿಸಿದ ಶಬ್ದ ಕೇಳಿತು. ಗುಂಪು ಚದರಿ ಚಲ್ಲಾ ಪಿಲ್ಲಿಯಾಗಿ ಓಟಕಿತ್ತಿತು. ಪೊಲೀಸರಿಗೇ ರಕ್ಷಣೆಬೇಕು. ತನಗೆ ಹೇಗೆ ಅವರು ರಕ್ಷಣೆ ಕೊಟ್ಟಾರು ಎನ್ನುವುದು ಅವಳಿಗೆ ಖಚಿತವಾಗಿ ಅವಳು ಮನೆಯತ್ತ ಹೆಜ್ಜೆಯಿಟ್ಟಳು.

ಅವಳ ಗಂಡನ ಗ್ರಹಚಾರ ನೆಟ್ಟಗಿತ್ತು, ಧೋ ಎಂದು ಸುರಿದ ಮಳೆ ಬೆಂಕಿಯನ್ನು ನಂದಿಸಿತು. ಈಗವಳು ಇನ್ನೊಂದು ಸಮಸ್ಯೆಯಲ್ಲಿ ಸಿಲುಕಿದಳು. ಮಳೆಯಿಂದಾಗಿ ಗಂಡನ ಚಾಪೆ, ಬೆಡ್ ಶೀಟು, ಹೊದಿಕೆ ಎಲ್ಲವೂ ಒದ್ದೆಯಾಗಿದ್ದವು. ಅವನು ಚಳಿಯಿಂದ ನಡುಗುತ್ತಿದ್ದ. ಅವಳು ಅಡಿಗೆ ಮನೆಗೆ ಓಡಿದಳು. ಅಲ್ಲಿ ಹೂ ತರುತ್ತಿದ್ದ ಎರಡು ಗೋಣಿಗಳಿದ್ದವು. ಅವಿನ್ನೂ ಒದ್ದೆಯಾಗಿರಲಿಲ್ಲ. ಗಂಡನ ಹೊದಿಕೆ ತೆಗೆದು ಅವನ್ನು ಹೊದಿಸಿದಳು. ತಾನು ನಡುಗುತ್ತಾ ಈಳಿಗೆ ಮಣೆ ಮೇಲೆ ಕುಳಿತು ತೂಕಡಿಸತೊಡಗಿದಳು.

ಮನೆಗಳಿಗೆ, ಪೊಲೀಸ್ ಸ್ಟೇಶನ್ನಿಗೆ ಬೆಂಕಿ ಹಚ್ಚಿದ ಗುಂಪು ಚದರಿ ಚೆಲ್ಲಾಪಿಲ್ಲಿಯಾದ ಮೇಲೆ ಡಿಸಿಪಿ, ಪೊಲೀಸು ಪಟಾಲಂ ಜೊತೆ ಸುಟ್ಟುಹೋದ ಮನೆಗಳನ್ನು ನೋಡಲು ಬಂದ. ಎರಡು ದಿವ್ಸ ಆಯ್ತು ಸಾಹೇಬರೇ, ವಿಪರೀತ ಜ್ವರದಲ್ಲಿ ಮಲಗಿದ್ದಾನೆ. ಮನೆಯಲ್ಲಿ ಒಂದು ಹಿಡಿ ಹಿಟ್ಟಿಲ್ಲ. ಆಸ್ಪತ್ರೆಗೆ ಸೇರಿಸೋಣವೆಂದರೆ ಹಣವಿಲ್ಲ. ನಾನು ಕರೆದರೆ ಆಂಬುಲೆನ್ಸ್ ಬರುವುದಿಲ್ಲ. ಹೇಗಾದರೂ ನನ್ನ ಗಂಡನನ್ನು ಬದುಕಿಸಿ ಎಂದು ಡಿಸಿಪಿ ಕಾಲಿಗೆ ಬಿದ್ದಳು. ಡಿಸಿಪಿ ಯಾರಿಗೋ ಫೋನು ಮಾಡಿ ಆಂಬುಲೆನ್ಸ್ ತರಿಸಿದ. ಅವಳು ಒಳಹೋಗಿ ಬುರುಖಾ ಹಾಕಿಕೊಂಡು ಮನೆಯಿಂದ ಕೊಟ್ಟಿದ್ದ ಎರಡು ಚಿನ್ನದ ಬಳೆ ತೊಟ್ಟುಕೊಂಡು ಆಂಬುಲೆನ್ಸ್ ಏರಿದಳು.

ಒಂದು ಆಸ್ಪತ್ರೆಯ ಅಧಿಕಾರಿ ಬೆಡ್ಡ್ ಖಾಲಿ ಇಲ್ಲ ಎಂದ. ಇನ್ನೊಬ್ಬ ಸ್ಟಾಫ್ ಇಲ್ಲವೆಂದ, ಮತ್ತೊಬ್ಬ ನಮ್ಮಲ್ಲಿ ಕೋವಿಡ್ ಪರೀಕ್ಷೆಯ ಲ್ಯಾಬ್ ಇಲ್ಲವೆಂದ. ಮಗದೊಬ್ಬ ಕೋವಿಡ್ ಪರೀಕ್ಷೆ ಮಾಡಿಸಿಕೊಂಡು ಬನ್ನಿ, ಕೋವಿಡ್ ಇಲ್ಲವೆಂದಾದರೆ ಅಡ್ಮಿಟ್ ಮಾಡಿಕೊಳ್ಳುತ್ತೇನೆ ಎಂದ. ಐದನೇ ಆಸ್ಪತ್ರೆಯ ಅಧಿಕಾರಿಯನ್ನು ಕಂಡಾಗ ಅವಳು ಕಾಲಿಗೆ ಬಿದ್ದು ಕಣ್ಣೀರ ಕತೆ ಹೇಳಿಕೊಂಡಳು. ಅವನಲ್ಲಿ ಮಾನವೀಯತೆ ಇನ್ನೂ ಉಳಿದುಕೊಂಡಿತ್ತು. ಆದರೆ, ಅಮ್ಮಾ ಇಪ್ಪತ್ತೈದು ಸಾವಿರ ಕೊಡದೆ ಅಡ್ಮಿಟ್ ಮಾಡುವುದಿಲ್ಲ ಎಂದುಬಿಟ್ಟ. ಅವಳು ತನ್ನ ಕೈಗಳಲ್ಲಿದ್ದ ಎರಡು ಚಿನ್ನದ ಬಳೆಗಳನ್ನು ಅವನ ಬೂಟುಗಾಲುಗಳ ಮೇಲೆ ಇರಿಸಿ ಕೈಮುಗಿದಳು. ಅವನು ಅವನ್ನು ತೆಗೆದುಕೊಂಡು ಕೋಟಿನ ಜೇಬಿಗೆ ಸೇರಿಸಿ ಕೈಸನ್ನೆ ಮಾಡಿದ. ಸಿಬ್ಬಂದಿಗಳು ಬಂದು ಅವಳ ಗಂಡನನ್ನು ಆಂಬುಲೆನ್ಸ್‌ನಿಂದ ಸ್ಟ್ರೆಚರಿಗೆ ವರ್ಗಾಯಿಸಿ ತಳ್ಳಿಕೊಂಡು ಒಳಹೋಗುವಾಗ ಅವಳು ಹಿಂಬಾಲಿಸಿದಳು. ನಿಲ್ಲು, ಅವನನ್ನು ಐಸೋಲೇಶನ್ನು ವಾರ್ಡಿಗೆ ಸೇರಿಸಬೇಕಾಗುತ್ತದೆ. ನೀವ್ಯಾರೂ ಅಲ್ಲಿಗೆ ಬರುವಂತಿಲ್ಲ. ನಾಳೆ ಬೆಳಗ್ಗೆ ಹತ್ತರ ಮೇಲೆ ಬಾ, ಏನಾಗಿದೆಯೆಂದು ತಿಳಿಸುತ್ತೇನೆ. ಅಧಿಕಾರಿ ತಡೆದಾಗ ಅವಳಿಗೆ ಅನ್ಯದಾರಿ ಕಾಣಲಿಲ್ಲ. ಆಂಬುಲೆನ್ಸಿನವ ಹೊರಟು ಹೋಗಿದ್ದ. ಆಸ್ಪತ್ರೆ ಕಾವಲುಗಾರ ಇನ್ನು ಗೇಟು ಹಾಕುವ ಸಮಯ. ಇಲ್ಲಿ ಜಗಲಿಯಲ್ಲಿ ಯಾರೂ ಕಾಯುವ ಹಾಗಿಲ್ಲ. ನಿನ್ನ ಮನೆಗೆ ಹೊರಟುಹೋಗು ಎಂದು ಗದರಿದ. ಅವಳ ಹಸಿದ ಹೊಟ್ಟೆಯಿಂದ ಥರಗುಡುವ ಕಾಲುಗಳನ್ನು ಎಳೆದುಕೊಂಡು ಮನೆಗೆ ತಲುಪುವಾಗ ಕತ್ತಲು ದಟ್ಟೈಸಿತ್ತು.